**ಹೆಚ್ಚುವರಿ ಸಿವಿಲ್ ಹಾಗೂ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಯಾದಗಿರಿ.**

**ಉಪಸ್ಥಿತರುಃ- ಶ್ರೀ ರಾಹುಲ ಚಾಂಭಾರ ಬಿ.ಎ.ಎಲ್.ಎಲ್.ಬಿ**
**ಹೆಚ್ಚುವರಿ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ಯಾದಗಿರಿ,**

**ಸಿ.ಸಿ. ನಂಃ 638/2019**

**ಫಿರ್ಯಾಧಿದಾರಃ ಕರ್ನಾಟಕ ಸರ್ಕಾರದ ಪರವಾಗಿ ಸೈದಾಪೂರ ಪೊಲೀಸ್ ಠಾಣೆ**

**// ವಿರುದ್ಧ //**

**ಆರೋಪಿ ಃ ಪ್ರಭು ಮತ್ತು ಇತರರು**

| | |
|---|---|
| **ಆರೋಪಿತರುಃ 1.** | ಪ್ರಭು ತಂದೆ ನಂದಪ್ಪ ಕುಂಬಾರ, ವಃ 25 ವರ್ಷ,<br>ಸಾಃ ರುಕ್ಮಾಪೇಟ ಸುರುಪುರ, ತಾಃ ಸುರಪುರ ಜಿಃ ಯಾದಗಿರಿ. |
| **2.** | ಹುಸೇನಭಾಷಾ @ ಭಾಷಾ ತಂದೆ ಹುಸೇನಸಾಬ ಪಠಾಣ,ವಃ 26 ವರ್ಷ,<br>ಸಾಃ ಕುಂಬಾರಪೇಟೆ ಸುರುಪುರ, ತಾಃ ಸುರಪುರ ಜಿಃ ಯಾದಗಿರಿ. |
| **3.** | ಮದರಸಾಬ ತಂದೆ ಮಕ್ತುಂಸಾಬ ದಾಯಲ ವಃ 24 ವರ್ಷ,<br>ಸಾಃ ಕುಂಬಾರಪೇಟೆ ಸುರುಪುರ, ತಾಃ ಸುರಪುರ ಜಿಃ ಯಾದಗಿರಿ. |
| **4.** | ಮೋನಪ್ಪ ತಂದೆ ಸಿದ್ದಪ್ಪ ಕಾಡಂಗೇರ, ವಃ 22 ವರ್ಷ,<br>ಸಾಃ ಕವಡಿಮಟ್ಟಿ ಗ್ರಾಮ, ತಾಃ ಸುರಪುರ ಜಿಃ ಯಾದಗಿರಿ. |
| **5.** | ಮಹ್ಮದ ಇಲಿಯಾಸ್ ತಂದೆ ಮಹ್ಮದ ಹಾಜಿಪಾಶ, ವಃ 27 ವರ್ಷ,<br>ಸಾಃ ಮನೆ ನಂಬರ 7-254 ಬಡಿ ಮಜೀದ್ ಮೋಮಿನಪುರ, ತಾಃ ಮತ್ತು ಜಿಃ ಕಲಬುರಗಿ. |

## ದೋಷಾರೋಪಣೆ

ದಿನಾಂಕಃ 29-01-2017 ರಂದು ಸೈದಾಪೂರ ಪೋಲಿಸ ಠಾಣೆಯ ಹದಿದಯಲ್ಲಿ ಬರುವ ಬಳಿಚಕ್ರ ಗ್ರಾಮದ ಚಾಸಾಃ 12 ರವರ ಜಮೀನಿನ ಮನೆ ಪಕ್ಕದಲ್ಲಿ ಕಟ್ಟಿದ ಎರಡು ಬಿಳಿ ಬಣ್ಣದ ಕೊಂಬೇರಿ ತಳಿಯ ಎತ್ತುಗಳು, ಒಂದು ಬಿಳಿ ಬಣ್ಣದ ಕೊಂಬೇರಿ ಆಕಳು, ಒಂದು ಬೂದು, ಒಂದು ಕೆಂಪು ಬಣ್ಣದ ಎರಡು ಜವಾರಿ ಎತ್ತುಗಳು ಮತ್ತು ಚಾಸಾಃ4 ರವರ ಜಮೀನಿನ ಮನೆಯ ಪಕ್ಕದಲ್ಲಿ ಕಟ್ಟಿದ ತಿಳಿ ಬಣ್ಣದ ಎರಡು ಜವಾರಿ ಎತ್ತುಗಳು ಹೀಗೆ 6 ಎತ್ತುಗಳು, ಒಂದು ಆಕಳು ಅಂದಾಜು

ಕಿಮ್ಮತ್ತು 3 ಲಕ್ಷ 60 ಸಾವಿರ ರೂಪಾಯಿ ಬೆಲೆ ಬಾಳುವ ಜಾನುವಾರುಗಳನ್ನು ಆರೋಪಿತರಾದ ನೀವು ಕೆಎ-36-ಎ-7641 ನೇದ್ದರ ವಾಹನದಲ್ಲಿ ಹಾಕಿಕೊಂಡು, ಗುಲ್ಬರ್ಗಾ ನಗರಕ್ಕೆ ಒಯ್ದು ತಾವು ರೈತರಂತೇಳಿ ಗೌಸ್ ಎಂಬ ವ್ಯಕ್ತಿಗೆ ಮಾರಾಟ ಮಾಡಿದ್ದು, ಈ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 379 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

(ಮೇಲ್ಕಾಣಿಸಿದ ಆಪಾದನೆ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಿ ತೆರೆದ ನ್ಯಾಯಾಲಯದಲ್ಲಿ ಆರೋಪಿಗೆ ತಿಳಿಯುವ ಭಾಷೆಯಲ್ಲಿ ಓದಿ ಹೇಳಲಾಯಿತು.)

ದಿನಾಂಕಃ 15-03-2024
ಸ್ಥಳ ಃ ಯಾದಗಿರಿ

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ.ದಂ.ಗಳು, ಯಾದಗಿರಿ.**